ಈಗ ಹಸಿವನ್ನು ಈಡೇರಿಸಿಕೊಳ್ಳುವ ಮಲ್ಟಿಪಲ್ ಮಾರ್ಗಗಳು ತೆರೆದುಕೊಂಡಿವೆ. ಆದರೆ ಸಣ್ಣ ಸಣ್ಣ ಸುಖದ ಬಾಗಿಲುಗಳೂ ಮುಚ್ಚಿಕೊಂಡಿವೆ. ನಿನಗೆ ಗೊತ್ತಾ, ಜಗತ್ತಿನ ಇವತ್ತಿನ ದೊಡ್ಡ ಸಮಸ್ಯೆ ಮತ್ತು ಚಾಲೆಂಜ್ ಎಂದರೆ ಸೆಕ್ಸ್. ಲಕ್ಷಾಂತರ ಬಾಳಸಂಗಾತಿಗಳು, ಪರಸ್ಪರ ಪ್ರೀತಿಸುತ್ತಿರುವವರು ಲೈಂಗಿಕ ತೃಪ್ತಿಯನ್ನು ಕನಿಷ್ಠ ಮಟ್ಟದಲ್ಲೂ ಪಡೆಯಲಿಕ್ಕೆ ಆಗುತ್ತಿಲ್ಲ. ಕಾಮ ತೃಪ್ತಿ ಇದೆಯಲ್ಲಾ, ಅದು ಮನುಷ್ಯನಲ್ಲಿ ಬದುಕಿನ ಬಗ್ಗೆ ಆಸಕ್ತಿಯನ್ನು, ಲವಲವಿಕೆಯನ್ನು ಮೂಡಿಸುತ್ತದೆ, ಮತ್ತು ಅದಮ್ಯವಾದ ಅನನ್ಯ ಚೈತನ್ಯವನ್ನು ತುಂಬುತ್ತದೆ. ಸೆಕ್ಸ್ ಈಸ್ ಸ್ಟ್ರಾಂಗೆಸ್ಟ್ ಟಾನಿಕ್ ವಿಚ್ ಸ್ಟಿಮ್ಯುಲೇಟ್ಸ್ ಎನಿ ಲಿವಿಂಗ್ ಥಿಂಗ್ ಇನ್ ದ ವರ್ಲ್ಡ್ ಟು ಲಿವ್ ಹ್ಯಾಪಿಲಿ. ಟ್ರಾನ್ಸ್‌ನಲ್ಲಿ ಲೈಂಗಿಕ ಪಾಲುದಾರರಿಬ್ಬರಲ್ಲೂ ಒಂದು ಮಧುರವಾದ ಸಮ್ಮೋಹನ ಶಕ್ತಿಯನ್ನು ಹುಟ್ಟುಹಾಕಿ ದೇಹ ಮತ್ತು ಮನಸ್ಸುಗಳೆರಡೂ ಸಮಬಲದಿಂದ ಆ ಕ್ರಿಯೆಯಲ್ಲಿ ಪಾಲ್ಗೊಳ್ಳುವಂತೆ ಮಾಡುವುದು. ನನ್ನ ಈ ಕಟ್ಟಡದಲ್ಲಿ ಎಂಬತ್ತು ಐಷಾರಾಮಿ ರೂಮುಗಳಿವೆಯೆಂದು ಹೇಳಿದ್ದೆನಲ್ಲವೆ, ಆಲ್ಮೋಸ್ಟ್ ಎಲ್ಲವೂ ದಂಪತಿಗಳಿಂದ ತುಂಬಿಹೋಗುತ್ತವೆ. ವಾರಕ್ಕೆ ಐದು ದಿನಗಳ ಕೋರ್ಸ್. ಸೋಮವಾರದಿಂದ ಶುಕ್ರವಾರದವರೆಗೆ. ಭಾನುವಾರ ರಾತ್ರಿಯೊಳಗಡೆ ಬಂದು ಜಾಯಿನ್ ಆದರೆ ಶುಕ್ರವಾರ ಸಂಜೆ ಡಿಪಾರ್ಚರ್. ನೀನು ನಂಬುವುದಿಲ್ಲ, ಸಣ್ಣ ಪ್ರಾಯದ ಕಪಲ್ಸ್‌ನಿಂದ ಹಿಡಿದು ಅರವತ್ತು ಎಪ್ಪತ್ತು ವರ್ಷ ವಯಸ್ಸಿನ ಪಾರ್ಟನರ್ಸ್ ಸಹಾ ಬರುತ್ತಿದ್ದಾರೆ. ನಾಲ್ಕು ಮಂದಿ ಸೈಕಾಲಜಿಸ್ಟ್ ಇದಾರೆ. ಸಮ್ಮೋಹನ ಸ್ಪೆಷಲಿಸ್ಟ್ ಇಬ್ಬರಿದ್ದಾರೆ. ಒಂದು ವಾರಕ್ಕೆ ಒಂದು ಜೋಡಿಗೆ ಐವತ್ತು ಸಾವಿರವಷ್ಟೆ ಚಾರ್ಜ್ ಮಾಡುವುದು. ಊಟ ವಸತಿಯಿಂದ ಹಿಡಿದು ಎಲ್ಲಾ ಸೌಕರ್ಯಗಳನ್ನೂ ಒದಗಿಸಲಾಗುತ್ತದೆ. ನಿನಗೆ ಗೊತ್ತಾ, ಮೂರು ತಿಂಗಳವರೆಗೂ ರಿಸರ್ವೇಶನ್ ಮುಗಿದಿದೆ. ವಿದೇಶಿ ಕಸ್ಟಮರ್ಸ್ ಜಾಸ್ತಿ ಆಗ್ತಿದಾರೆ. ಟಾಪ್ ಬಿಸಿನೆಸ್ ಕ್ಲಾಸ್ ಮತ್ತು ಐಟಿ–ಬಿಟಿಯವರದೂ ವಿಪರೀತ ರಶ್ ಇದೆ. ಎಲ್ಲಾ ಖರ್ಚೂ ಹೋಗಿ ವಾರಕ್ಕೆ ನನಗೆ ಇಪ್ಪತ್ತು ಲಕ್ಷ ಮಿಗುತ್ತಿದೆ. ಡೊಂಟ್ ಯು ಥಿಂಕ್ ಐಯ್ಯಾಮ್ ಡೂಯಿಂಗ್ ವೈಸ್ ಜಾಬ್' ಮಾತು ಮುಗಿಸಿ ಕಣ್ಣರಳಿಸಿ ಮಾತನಾಡಿದ್ದಳು ಪ್ರಿಯಾಂಕಾ.

'ರಿಯಲಿ ಇಂಟರೆಸ್ಟಿಂಗ್ ಅಂಡ್ ಆಲ್ ಟುಗೆದರ್ ಎ ಡಿಫರೆಂಟ್ ಟೈಪ್ ಆಫ್ ಬಿಸಿನೆಸ್...' ವೈಲ್ಡನ ಮೆಚ್ಚುಗೆಯ ಮಾತುಗಳಲ್ಲಿ ಒಂದಿಷ್ಟು ವ್ಯಂಗ್ಯವೂ ಬೆರೆತಿತ್ತು.

'ವ್ಯಾಪಾರವಲ್ಲದ್ದು ಇವತ್ತು ಜಗತ್ತಿನಲ್ಲಿ ಏನಿದೆ ಹೇಳು? ಪೋಷಕರ–ಮಕ್ಕಳ ನಡುವೆ, ಗಂಡ–ಹೆಂಡತಿಯ ನಡುವೆ, ಒಡಹುಟ್ಟಿದವರ ನಡುವೆ, ಸ್ನೇಹಿತರ ನಡುವೆ ಇವತ್ತು ಪ್ರತಿಕ್ಷಣ ಉಸಿರಾಡುತ್ತಿರುವುದೇ ಕಮರ್ಷಿಯಲ್ ಸಂಬಂಧಗಳು. ಸ್ಥಿತಿವಂತರು ಬೇರೆಯವರನ್ನು ಶೋಷಣೆ ಮಾಡಿದರೆ, ಇಲ್ಲದವರು ತಮ್ಮನ್ನು ತಾವೇ ಶೋಷಣೆಗೆ ಒಳಪಡಿಸಿಕೊಳ್ಳುತ್ತಾರೆ. ಇನ್ನೂ ಸರಳವಾಗಿ ಹೇಳಬೇಕೆಂದರೆ, ನನಗೆ ಆನ್‌ಲೈನ್ ಮೂಲಕವೇ ಸಾವಿರಾರು ಕಸ್ಟಮರ್ಸ್ ಬುಕ್ ಆಗುತ್ತಾರೆ. ಒಂದು ವಜ್ರದ ಅಂಗಡಿಯನ್ನು ದುಡ್ಡಿರುವವರು ತಾವಾಗಿಯೇ ಹುಡುಕಿಕೊಂಡು ಹೋಗಿ ಕೋಟ್ಯಂತರ ರೂಪಾಯಿ ಸುರಿಯುತ್ತಾರೆ. ಇನ್ನು ಕಾಮಾಟಿಪುರದ ವೇಶ್ಯೆಯರಿಗೆ ತಂದೆ ತಾಯಿ, ಅಣ್ಣ ತಮ್ಮ ಹಾಗೂ ಗಂಡಂದಿರೇ ಗಿರಾಕಿಗಳನ್ನು ಹುಡುಕಿ ತರುತ್ತಾರೆ' ಪ್ರಿಯಾಂಕಾಳ ಮಾತುಗಳಲ್ಲಿ ನಿಖರವಾದ ಸ್ಪಷ್ಟತೆ ಇತ್ತು. ಆಸ್ಕರ್ ವೈಲ್ಡನಿಗೆ ಏನೂ ಮಾತನಾಡಲು ತೋಚದೆ ವಿಸ್ಮಯದಿಂದ ಅವಳನ್ನೇ ನೋಡುತ್ತಲಿದ್ದ.

'ಆಸ್ಕರ್, ಏನು ಯೋಚನೆ ಮಾಡ್ತ ಇದೀಯಾ' ಪ್ರಿಯಾಂಕಾ ಎಚ್ಚರಿಸುವವಳಂತೆ ಕೇಳಿದ್ದಳು.

'ನಾನು ಹೊರಡುತ್ತೇನೆ. ಆದರೆ ನೀನು ನನ್ನಲ್ಲಿ ನಿನ್ನ ಬಗ್ಗೆ ತುಂಬಾ ಆಸಕ್ತಿಯನ್ನು ಹುಟ್ಟಿಸಿಬಿಟ್ಟೆ. ನನಗೆ ಸ್ವಲ್ಪ **hurt** ಆದಂತೆ ಅನ್ನಿಸ್ತಿದೆ' ತೊದಲಿದ್ದ ವೈಲ್ಡ್.

'ಹೌದು ಆಸ್ಕರ್, ಭಾವುಕತೆ ಇದ್ರೆ ನೋವು ಅದರ ಜೊತೆಯಲ್ಲೇ ತೆಕ್ಕೆಹಾಕಿಕೊಂಡಿರುತ್ತದೆ. ಬೇರೆಯವರೆಲ್ಲಾ ತನಗಾಗಿ ಜೀವಿಸಬೇಕು ಎಂದೆನಿಸತೊಡಗುತ್ತದೆ. ಲಿಟರೇಚರ್ ಕೆಲವರಲ್ಲಿ ಇಂಥ ಭಾವುಕತೆಯನ್ನು ಹುಲುಸಾಗಿ ಪೋಷಿಸುತ್ತಿರುತ್ತದೆ. ಎನಿವೇಸ್ ವಿ ಶುಡ್ ಟ್ರೈ ಟು ಎಸ್ಕೇಪ್ ಫ್ರಮ್ ಇನ್ಟೆನ್ಸ್ ಸೆಂಟಿಮೆಂಟ್ಸ್' ಅವಳ ಅರ್ಥಗರ್ಭಿತ ಮಾತುಗಳು ಅವನನ್ನು ಎಚ್ಚರಿಸುವಂತೆ ಮಾಡಿದ್ದವು. ಅವಳೊಂದಿಗೆ ಸಂವಾದಿಸಲು ತನಗಾಗುತ್ತಿಲ್ಲ ಎಂಬ ಆಲೋಚನೆಯಲ್ಲಿ ನ್ಯೂರೊ–ಸೈಕಾಲಜಿಯಲ್ಲಿ ಅವಳು ಸಾಕಷ್ಟು ಪರಿಣಿತಿಯನ್ನು ಸಾಧಿಸಿರುವ ಬಗ್ಗೆ ಸ್ಪಷ್ಟವಾದ ಚಹರೆ ಸಿಕ್ಕಿತ್ತು.

'ಖುಷಿಯಿಂದ ಇದೆಲ್ಲವನ್ನು ನೀನು ಬಿಟ್ಟು ಬರುವುದಾದರೆ, ನನ್ನೊಂದಿಗೆ ಬಾಳು ಸವೆಸುವುದಾದರೆ ನಿಜಕ್ಕೂ ನಾನು ಅದೃಷ್ಟವಂತನೆಂದು ಭಾವಿಸುತ್ತೇನೆ. ಮತ್ತು ಈ ಬಗ್ಗೆ ನಮ್ಮಿಬ್ಬರ ಕುಟುಂಬಗಳಿಗೂ ತಿಳಿಸಿಬಿಡುತ್ತೇನೆ' ಆಸ್ಕರ್ ವೈಲ್ಡನ ಮಾತುಗಳಲ್ಲಿ ಒಂದು ರೀತಿಯ ವಿನಂತಿ ಮನೆಮಾಡಿತ್ತು.

'ನಾನು ನನ್ನ ಹಾದಿಯಲ್ಲಿ ತುಂಬಾ ದೂರ ಬಂದುಬಿಟ್ಟಿದ್ದೀನಿ ಆಸ್ಕರ್. ಒಂದೊಮ್ಮೆ ನಿನಗಾಗಿ ಪರಿತಪಿಸಿದವಳು ನಾನು. ಮನುಷ್ಯ ಒಮ್ಮೆ ಒಂದು ಸಂಗತಿಯಿಂದ ವಿಮುಖನಾದರೆ ಮತ್ತೆ ಅದರ ಕಡೆ ಹಿಂತಿರುಗುವುದು ಸೂಕ್ತವಲ್ಲ. ನಾನು ನನ್ನ ವರ್ಕ್ ಅಂಡ್ ಬಿಸಿನೆಸ್‌ಗೆ ಬಹಳವಾಗಿ ಕಮಿಟ್ ಆಗಿದ್ದೇನೆ. ಒಂದು ವೇಳೆ ನಮ್ಮಿಬ್ಬರ ಮದುವೆಯಾದರೂ ಮ್ಯಾರೀಡ್ ಲೈಫ್‌ಗೆ ಜಸ್ಟೀಸ್ ಒದಗಿಸಲು ನನ್ನಿಂದ ಸಾಧ್ಯವಾಗುವುದಿಲ್ಲ. ನಿನಗೆ ತೀರಾ ಅಗತ್ಯವಾಗಿ ನನ್ನೊಂದಿಗೆ ಸೆಕ್ಸ್ ಬೇಕೆನಿಸಿದರೆ ನೀನು ಯಾವಾಗ ಬಯಸುತ್ತೀಯೋ ಆಗ ರೆಡಿ. ದಿಸ್ ಈಸ್ ಜಸ್ಟ್ ಬಿಕಾಸ್ ನಾನು ಹಿಂದೆ ಯಾವತ್ತೋ ನಿನ್ನನ್ನು ಬಯಸಿದ್ದೆ ಮತ್ತು ಇವತ್ತು ನೀನು ನನ್ನನ್ನು ಹುಡುಕಿಕೊಂಡು ಬಂದಿದ್ದೀಯ ಅದಕ್ಕೆ...' ಈಗವಳು ಅವನ ಹತ್ತಿರ ಬಂದು ಕೆನ್ನೆ ಮತ್ತು ಹಣೆಗಳನ್ನು ಮೃದುವಾಗಿ ಚುಂಬಿಸಿದ್ದಳು. ಅವನು ಹೊರಟು ನಿಂತ. ಮಧ್ಯಾಹ್ನದ ಊಟ ಮುಗಿಸಿಕೊಂಡು ಹೊರಡಲು ಹೇಳಿದ್ದಳು. ತಡವಾಗುತ್ತದೆಂದು ಹೇಳಿ ಅವನು ಹೊರಟುಬಿಟ್ಟ. ಅವಳು ಕಾರಿನವರೆಗೂ ಬೀಳ್ಕೊಡಲು ಬಂದಿದ್ದಳು. ಕಾರು ಹತ್ತುವಾಗ ಅವನ ಕೈಕುಲುಕುತ್ತಾ 'ಈ ಟ್ರಾನ್ಸ್‌ಗೆ ನೀನು ಯಾವಾಗ ಬೇಕಾದರೂ ಬರಬಹುದು. ಒಬ್ಬನೇ ಆದರೂ ಸರಿ, ಲೈಫ್ ಪಾರ್ಟ್ನರ್ ಜೊತೆಯಲ್ಲಾದರೂ ಸರಿ. ಬಟ್ ಒನ್ ಥಿಂಗ್, ಫಾರ್ ಯು ದೇರ್ ವಿಲ್ ಬಿ ನೊ ಚಾರ್ಜ್' ಎಂದು ಮುಖದ ತುಂಬಾ ನಗು ಚೆಲ್ಲಿ ಹೇಳಿದ್ದಳು. ತೋಟದಲ್ಲಿ ವಿವಿಧ ಪಕ್ಷಿಗಳ ಚಿಲಿಪಿಲಿ ನಾದ ಹರಡಿಕೊಂಡಿತ್ತು. ಹೃದಯ ಭಾರದಿಂದ ಆಸ್ಕರ್ ವೈಲ್ಡ್ ಮುಂಬಯಿಯ ಕಡೆ ಹೊರಟ.

ನಿಜಕ್ಕೂ ಪ್ರಿಯಾಂಕಾ ಅಗರ್ವಾಲ್ ಅವನ ಮನಸ್ಸನ್ನು ಸಂಪೂರ್ಣವಾಗಿ ಆಕ್ರಮಿಸಿಕೊಂಡಿದ್ದಳು. ತನ್ನನ್ನು ಅವಳು ಡಿಗ್ರಿ ಓದುವಾಗಲೇ ಇಷ್ಟಪಟ್ಟ ಸಂಗತಿಯನ್ನು ತಿಳಿದು ಒಂದು ರೀತಿಯ ಸಾರ್ಥಕ ಭಾವನೆ ಮೂಡಿತ್ತು ಅವನಲ್ಲಿ. ಅಂಜಲಿ ದೇಸಾಯಿ, ಸಾಯಿಪ್ರಭೆ, ಪೂರ್ವಿಕಾ, ಮೈಥಿಲಿ ಎಲ್ಲರೂ ಕ್ಷಣ ಮನದಲ್ಲಿ ತೇಲಿಬಂದು ಅವರೆಲ್ಲರಿಗಿಂತಲೂ ಎಲ್ಲಾ ವಿಧದಲ್ಲೂ ಪ್ರಿಯಾಂಕಾ ಅಗರ್ವಾಲ್ ಮಿಗಿಲು ಅನ್ನಿಸಿದಳು. ಅವರಲ್ಲಿದ್ದ ಕಲ್ಚರಲ್ ಕ್ರೂಡ್‌ನೆಸ್ ಆಗಲೀ, ಬಂದದ್ದನ್ನು ಬೇಗನೆ ಕಬಳಿಸಬೇಕೆನ್ನುವ ನಯಘಾತುಕತನವಾಗಲೀ ಪ್ರಿಯಾಂಕಾಳಲ್ಲಿ ಇದೆಯೆಂದು ಅನ್ನಿಸಲಿಲ್ಲ. ಅವಳೇ ಹೇಳಿದಂತೆ ಬಲವಂತವಾಗಿ ಜೊತೆಯಲ್ಲಿ ಬದುಕುವುದು ಸಹ ಅಪಾಯಕಾರಿಯೇ. ಅಷ್ಟರಲ್ಲಿ ಫೋನ್ ರಿಂಗಾಗಿತ್ತು. ಫೋನ್ ಸ್ಕ್ರೀನ್ ಮೇಲೆ ಅನ್ನೋನ್ ನಂಬರ್ ಡಿಸ್‌ಪ್ಲೇ ಆಗುತ್ತಿತ್ತು. ರಿಸೀವ್ ಮಾಡಿಕೊಳ್ಳಲೋ ಬೇಡವೋ ಎಂಬ ಸಂದಿಗ್ಧಕ್ಕೆ ಬಿದ್ದವನು ಸುಮ್ಮನಿದ್ದ. ಲಾಸ್ ವೆಗಾಸ್‌ನಿಂದ ಬಂದ ಮೇಲೆ ಇದುವರೆಗೂ ಪೂರ್ವಿಕಾಳಿಂದ ಫೋನ್ ಇರಲಿಲ್ಲ. ಏಳೆಂಟು ಫಾರ್ವರ್ಡೆಡ್ ಮೆಸೇಜುಗಳಿದ್ದವು. ಅವುಗಳಿಗೆ ಅವನೇನೂ ರೆಸ್ಪಾಂಡ್ ಮಾಡಿರಲಿಲ್ಲ. ಲಾಸ್ ವೆಗಾಸ್‌ನಲ್ಲಿ ಸ್ಪೆಷಲ್ ಕಾಕ್‌ಟೇಲ್ ಕುಡಿದು ಅವಳು ಲೆವಿನ್ಸ್ ಜೊತೆಗೆ ಸುಖವಾಗಿ ನರಳುತ್ತಿದ್ದ ದೃಶ್ಯ ನೆನಪಾಗಿ ಅವನಲ್ಲಿ ಅಪಾರವಾದ ಕಸಿವಿಸಿಯನ್ನುಂಟುಮಾಡಿತ್ತು.

ಹಾಗಾದರೆ ತಾನು ಮೈಥಿಲಿಯ ತೋಳ್ತೆಕ್ಕೆಯಲ್ಲಿ ನರಳಿದ್ದು. ಥೂತ್! ಅದಕ್ಕೆ ತಾನಂತೂ ಹೊಣೆಯಲ್ಲ. ಅದೊಂದು ಬೇಕಾಗಿಯೇ ಮಾಡಿದ ಫನ್ನಿ ಟ್ರ್ಯಾಪ್. ದೇಹ ಮನಸ್ಸನ್ನು ವಂಚಿಸುತ್ತದೆಯೋ? ಇಲ್ಲ ಮನಸ್ಸು ದೇಹವನ್ನು ವಂಚಿಸುತ್ತದೆಯೋ? ಈ ಪ್ರಶ್ನೆಗಳಿಗೆ ಉತ್ತರವಾದರೂ ಎಲ್ಲಿ ಹುಡುಕುವುದು. ದೇಹ ಮತ್ತು ಮನಸ್ಸುಗಳು ಒಂದನ್ನೊಂದು ನಂಬಿಸುತ್ತಾ, ವಂಚಿಸುತ್ತಾ, ದಿಕ್ಕು ತಪ್ಪಿಸುತ್ತಾ ನಿರಂತರವಾಗಿ ಆಟವಾಡುತ್ತಲೇ ಇರುವ ಪರಿ ಪ್ರಕೃತಿ ಮನುಷ್ಯನಿಗೆ ಗುಟ್ಟು ಬಿಟ್ಟುಕೊಡದ ಒಂದು ವಿಚಿತ್ರ, ವಿಶಿಷ್ಟವಾದ ಸಂಗತಿಯೇ ಇರಬೇಕೆಂಬ ತರ್ಕಕ್ಕೆ ಬಿದ್ದ. ಮತ್ತೆ ಅದೇ ಅನ್ನೋನ್ ಫೋನ್ ಕಾಲ್ ಬರುತ್ತಿದೆ.

(ಸಶೇಷ)